ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.

ಸಂಖ್ಯೆ: ಸಿ1/SSLC/2018-ಪರೀ/ಪ.ಪು/10/2017-18 ದಿನಾಂಕ: 12.12.2017

ಉಪನಿರ್ದೇಶಕರು (ಆಡಳಿತ),
ಸಾರ್ವಜನಿಕ ಶಿಕ್ಷಣ ಇಲಾಖೆ,

______________________ ಜಿಲ್ಲೆ,

______________________

ಮಾನ್ಯರೆ,

ವಿಷಯ: ಮಾರ್ಚ್/ಏಪ್ರಿಲ್-2018ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಅನುತ್ತೀರ್ಣರಾದ ಪುನರಾವರ್ತಿತ ಭಾಷಾವಾರು ಅಭ್ಯರ್ಥಿಗಳು ಯಾವ ಪಠ್ಯಪುಸ್ತಕದಲ್ಲಿ ವ್ಯಾಸಂಗ ಮಾಡಬೇಕು ಎಂಬುದರ ಬಗ್ಗೆ ಮಾಹಿತಿಯನ್ನು ನೀಡುವ ಕುರಿತು.

ಉಲ್ಲೇಖ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು, ರವರ ಪತ್ರ ಸಂಖ್ಯೆ: TA/ಕ.ಪ.ಪು.ಸಂ/ ರಾ.ಪ.ಪ.ಪು.ರ/ ಪ.ಪು.ಪ/02/2016-17, ದಿ:10.11.2017

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2014-15ನೇ ಶೈಕ್ಷಣಿಕ ವರ್ಷದಿಂದ ಸಿಸಿಇ ಆಧಾರಿತ ಪರೀಕ್ಷಾ ಪದ್ಧತಿಯನ್ನು ಮಾರ್ಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ ಹಾಗೂ 2014-15ನೇ ಸಾಲಿನಿಂದ 10ನೇ ತರಗತಿಯ ಭಾಷಾವಾರು ಹಾಗೂ ಕೋರ್ ವಿಷಯಗಳಲ್ಲಿ ಹೊಸ ಪಠ್ಯಪುಸ್ತಕಗಳನ್ನು ಅಳವಡಿಸಲಾಗಿದ್ದು, ಹೊಸ ಪಠ್ಯಪುಸ್ತಕದನ್ವಯ ಪ್ರಶ್ನೆಪತ್ರಿಕೆಗಳನ್ನು ರಚಿಸಿ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಮೇಲ್ಕಂಡ ಉಲ್ಲೇಖದನ್ವಯ, 2017-18ನೇ ಸಾಲಿನಿಂದ ಪ್ರಸ್ತುತ ಇರುವ ಹೊಸ ಪಠ್ಯಪುಸ್ತಕಗಳ ಕೋರ್ ವಿಷಯಗಳ ಪಠ್ಯಪುಸ್ತಕಗಲ್ಲಿ ಯಾವುದೇ ಪರಿಷ್ಕೃತಗೊಳಿಸದೇ ಯಥಾವತ್ತು ಮುಂದುವರೆಸಲಾಗಿದೆ. ಭಾಷಾವಾರು ಹೊಸ ಪಠ್ಯಪುಸ್ತಕಗಳಲ್ಲಿ ಕೆಲವು ಭಾಷಾವಾರು ಪಠ್ಯಪುಸ್ತಕಗಳನ್ನು ಪರಿಷ್ಕೃತಗೊಳಿಸಲಾಗಿದೆ ಹಾಗೂ ಕೆಲವೊಂದು ಭಾಷಾವಾರು ಪಠ್ಯಪುಸ್ತಕಗಳನ್ನು ಪರಿಷ್ಕೃತಗೊಳಿಸದೇ ಹಾಗೆಯೇ ಮುಂದುವರೆಸಲಾಗಿದೆ. 10ನೇ ತರಗತಿಯ ಪ್ರಥಮ ಭಾಷೆಗಳ ಪಠ್ಯಪುಸ್ತಕಗಳಲ್ಲಿ ಕನ್ನಡ (01ಕೆ), ಹಿಂದಿ (06ಹೆಚ್), ಮರಾಠಿ (08ಎಂ), ತಮಿಳು (10ಟಿ), ಸಂಸ್ಕೃತ (16ಎಸ್), ದ್ವಿತೀಯ ಭಾಷೆಯ ಪಠ್ಯಪುಸ್ತಕಗಳಲ್ಲಿ ಇಂಗ್ಲೀಷ್ (31ಇ), ಕನ್ನಡ (33ಕೆ) ಹಾಗೂ ತೃತೀಯ ಭಾಷೆಗಳ ಪಠ್ಯಪುಸ್ತಕಗಳಲ್ಲಿ ಹಿಂದಿ (61ಹೆಚ್), ಕನ್ನಡ (62ಕೆ), ಉರ್ದು(66ಯು), ಸಂಸ್ಕೃತ (67ಎಸ್), ತುಳು (69ಡಿ/ಟಿ) ಪರಿಷ್ಕೃತಗೊಳಿಸಲಾಗಿದ್ದು, ತೃತೀಯ ಭಾಷೆಗಳಾದ ಇಂಗ್ಲೀಷ್ (63ಇ), ಅರೇಬಿಕ್ (64ಎ), ಕೊಂಕಣಿ (68ಡಿ/ಕೆ) ಪಠ್ಯಪುಸ್ತಕಗಳನ್ನು ಪರಿಷ್ಕೃತಗೊಳಿಸದೇ ಮುಂದುವರೆಸಲಾಗಿದೆ ಎಂದು ತಿಳಿದುಬಂದಿರುತ್ತದೆ.

ಮಾರ್ಚ್/ಏಪ್ರಿಲ್-2018ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಶಾಲಾ ಅಭ್ಯರ್ಥಿಗಳಾಗಿ ಹಾಗೂ ಖಾಸಗಿ ಅಭ್ಯರ್ಥಿಗಳಾಗಿ ನೋಂದಣಿಯಾಗಿರುವ ಅಭ್ಯರ್ಥಿಗಳು ಪರಿಷ್ಕೃತವಾಗಿರುವ ಭಾಷಾವಾರು ಪಠ್ಯಪುಸ್ತಕಗಳನ್ನು ಅಭ್ಯಾಸ ಮಾಡುವುದು. ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳು ಪರಿಷ್ಕೃತವಾಗದೆ ಇರುವ ಭಾಷಾವಾರು ಪಠ್ಯಪುಸ್ತಕಗಳನ್ನು ಅಭ್ಯಾಸ ಮಾಡುವುದು.

ಏಪ್ರಿಲ್-2011ರ ಪೂರ್ವದಲ್ಲಿನ ಅಭ್ಯರ್ಥಿಗಳು ಅನುತ್ತೀರ್ಣರಾಗಿ ಮಾರ್ಚ್/ಏಪ್ರಿಲ್-2018ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಪ್ರಥಮವಾಗಿ ನೋಂದಣಿಯಾಗಿ ಹಾಜರಾಗುತ್ತಿದ್ದಲ್ಲಿ ಪರಿಷ್ಕೃತವಾಗಿರುವ ಭಾಷಾವಾರು ಪಠ್ಯಪುಸ್ತಕಗಳನ್ನು ಅಭ್ಯಾಸ ಮಾಡುವುದು. ಏಪ್ರಿಲ್-2011ರ ಪೂರ್ವದಲ್ಲಿನ ಅಭ್ಯರ್ಥಿಗಳು ಅನುತ್ತೀರ್ಣರಾಗಿ ಮಾರ್ಚ್/ಏಪ್ರಿಲ್-2016 ಹಾಗೂ ಮಾರ್ಚ್/ಏಪ್ರಿಲ್-2017ರಲ್ಲಿ ಪರೀಕ್ಷೆಗೆ ಹಾಜರಾಗಿದ್ದಲ್ಲಿ ಪರಿಷ್ಕೃತವಾಗದ ಭಾಷಾವಾರು ಹೊಸ ಪಠ್ಯಪುಸ್ತಕಗಳನ್ನು ಒಟ್ಟು ಆರು (06) ಪ್ರಯತ್ನಗಳವರೆಗೆ ಅಭ್ಯಾಸ ಮಾಡುವುದು ಹಾಗೂ ಇಂತಹ ಅಭ್ಯರ್ಥಿಗಳಿಗೆ ಕ್ರಮವಾಗಿ ಜೂನ್-2018 ಹಾಗೂ ಜೂನ್-2019 ಅಂತಿಮ ಪ್ರಯತ್ನವಾಗಿರುತ್ತದೆ. ಮಾರ್ಚ್/ಏಪ್ರಿಲ್-2018ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಭಾಷಾವಾರು ವಿಷಯಗಳಲ್ಲಿ ಪರಿಷ್ಕೃತವಾಗಿರುವ ಹಾಗೂ ಪರಿಷ್ಕೃತವಾಗದೇ ಇರುವ ಪಠ್ಯಪುಸ್ತಕಗಳನ್ನು ಆಧರಿಸಿ ಪ್ರಶ್ನೆಪತ್ರಿಕೆಗಳನ್ನು ರಚಿಸಿ ವಿತರಿಸಲಾಗುವುದು. ಈ ವಿಷಯದ ಬಗ್ಗೆ ಪ್ರೌಢಶಾಲಾ ಮುಖ್ಯ ಶಿಕ್ಷಕರು ಶಾಲಾ ಸೂಚನಾ ಫಲಕದಲ್ಲಿ ಪ್ರಕಟಿಸುವುದು ಹಾಗೂ ಪ್ರಸ್ತುತ ಶಾಲೆಗೆ ಬರುತ್ತಿರುವ ವಿದ್ಯಾರ್ಥಿಗಳಿಗೆ ಅನುತ್ತೀರ್ಣರಾದ ಗೊತ್ತಿರುವ ಅಭ್ಯರ್ಥಿಗಳಿಗೆ ವಿಷಯಗಳನ್ನು ತಿಳಿಸುವಂತೆ ಮಾರ್ಗದರ್ಶನ ಮಾಡುವುದು. ಈ ಬಗ್ಗೆ ಜಿಲ್ಲಾ ಉಪನಿರ್ದೇಶಕರು / ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಭೆಗಳಲ್ಲಿ ಪ್ರಕಟಿಸುವುದು ಹಾಗೂ ಪ್ರೌಢಶಾಲಾ ಮುಖ್ಯ ಶಿಕ್ಷಕರು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲು ತಿಳಿಸಿದೆ.

ತಮ್ಮ ನಂಬುಗೆಯ

(ವಿ.ಸುಮಂಗಲ)
ನಿರ್ದೇಶಕರು (ಪರೀಕ್ಷೆಗಳು)

ಪ್ರತಿಯನ್ನು:

1. ರಾಜ್ಯದ ಎಲ್ಲಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಅನುದಾನರಹಿತ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.